# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1ಜಿ)ಪಿಆರ್/ 87 /2021-22
eoffice No. 16816

ಮುಖ್ಯ ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು
ಬೆಂಗಳೂರು, ದಿನಾಂಕ: 11/02/2022

## ಕಛೇರಿ ಆದೇಶ

ವಿಷಯ: ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ: ಪಿಆರ್/333/06-07, ದಿ: 09-03-2012.
2) ಸಹಾಯಕ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ರವರ ವರದಿ ದಿ: 02-11-2020 ಮತ್ತು 29-11-2021.
3) ಜಂಟಿ ಆಯುಕ್ತರು (ದಕ್ಷಿಣ) ರವರ ವರದಿ ದಿನಾಂಕ: 29-03-2021.

* * * * *

ಶ್ರೀ ಎನ್. ಕೃಷ್ಣಮೂರ್ತಿ, ದ್ವಿತೀಯ ದರ್ಜೆ ಸಹಾಯಕ, ಸಹಾಯಕ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರು ನಗರ ಪಾಲಿಕೆ ಸೇವೆಗೆ ಬ್ಯಾಕ್‌ಲಾಗ್ ಅಡಿಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ದಿನಾಂಕ: 26-03-2012 ರಂದು ನೇಮಕಗೊಂಡು, ಎರಡು ವರ್ಷಗಳ ಪರೀಕ್ಷಾರ್ಥ ಸೇವಾ ಅವಧಿಯಲ್ಲಿರುತ್ತಾರೆ. ಈ ಅವಧಿಯಲ್ಲಿ ಸದರಿ ಹುದ್ದೆಗೆ ನಿಗಧಿಪಡಿಸಲಾಗಿರುವ ಇಲಾಖಾ ಪರೀಕ್ಷೆಗಳ ಪೈಕಿ ಕೊನೆಯದಾಗಿ ಅಕೌಂಟ್ಸ್ ಲೋಯರ್ ಪರೀಕ್ಷೆಯನ್ನು ದಿನಾಂಕ: 13-12-2014 ರಂದು ಬರೆದು ಉತ್ತೀರ್ಣರಾಗಿರುವುದನ್ನು ಹಾಗೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ವಿನಾಯಿತಿ ಹೊಂದಿರುವುದನ್ನು ಪರಿಗಣಿಸಿ, ಸದರಿಯವರ ಪರೀಕ್ಷಾರ್ಥ ಸೇವಾವಧಿಯನ್ನು ದಿನಾಂಕ: 26-03-2014 ರಿಂದ 13-12-2014ರ ವರೆಗೆ ವಿಸ್ತರಿಸಿ, 1977ರ ಕೆ.ಸಿ.ಎಸ್ (ಪ್ರೊಬೆಷನರಿ) ನಿಯಮಾವಳಿಗಳ ನಿಯಮ 4ರನ್ವಯ ಸದರಿಯವರು ದಿ: 14-12-2014ಕ್ಕೆ ಪರೀಕ್ಷಾರ್ಥ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿದೆ ಹಾಗೂ 1977ರ ಕೆ.ಸಿ.ಎಸ್ (ಪ್ರೊಬೆಷನರಿ) ನಿಯಮಾವಳಿಗಳ ನಿಯಮ 9 ರಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಯಲ್ಲಿ ಖಾಯಂಗೊಳಿಸಲಾಗಿದೆ.

ಮಾನ್ಯ ವಿಶೇಷ ಆಯುಕ್ತರು (ಆಡಳಿತ)
ರವರ ಆದೇಶದಂತೆ)

11/2/22
ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
: ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ/ಆಡಳಿತ/ಹಣಕಾಸು) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಕಳುಹಿಸಿದೆ.
: ಸಹಾಯಕ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ರವರಿಗೆ ಕಳುಹಿಸಿದೆ.
: ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಮುಲೆಅ/ಮುಲೆಪ/ಉ.ನಿ (ಹಣಕಾಸು-ದಕ್ಷಿಣ) ರವರುಗಳಿಗೆ ಕಳುಹಿಸಿದೆ.
: ಕಛೇರಿ ಪ್ರತಿ

235
19/2/22